2. Completion of tank works in Ankola Village of Hukkeri Taluk, Belgaum District;

3. Enquiry into mal-administration in Alur K.M.V.V.U. society in Hukkeri Taluk, Belgaum District.

4. Construction of underground road near Kollapur Yaktranaka in Sankeshwar, Hukkeri Taluk, Belgaum District;

5. Delay in construction of buildings for primary School and Hospital under I.P.p Scheme in Prachhapura Village of Hukkeri Taluk, Belgaum District;

6. Immediate release of funds for construction of Temples in Kanagala Village of Hukkeri Taluk, Belgaum District to Mahadeva and Kalmeshwara Temple Trust;

7. Sanction of Integrated National Water Supply Scheme to Vellanki, Dondagatti and Kotta Village, of Hukkeri Taluk, Belgaum District; and

8. Construction of Bridges on Sankeshwar-Belgaum-Chikkodi Road in Hukkeri Taluk.

ಅಧ್ಯಕ್ಷರು.—ಆರ್ಜಿಗಳನ್ನು ಒಪ್ಪಿಸಲಾಯಿತು. ಈಗ ಗಮನ ಸೆಳೆಯುವ ಸೂಚನೆ. ಮೊದಲನೆಯದು ದೊಡ್ಡಮೇಟಿಯವರ ಗಮನ ಸೆಳೆಯುವ ಸೂಚನೆ. ಮಾನ್ಯ ವಿದ್ಯುತ್ ಮಂತ್ರಿಗಳಿಲ್ಲ. ಎರಡನೆಯದು ಸ್ವಾಮಿರಾವ್ ಅವರದು ಕಂದಾಯ ಮಂತ್ರಿಗಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸಂಬಂಧಪಟ್ಟ ಮಂತ್ರಿಗಳು ತಕ್ಷಣ ಬರತಕ್ಕಂಥಾದು ಅವರ ಕರ್ತವ್ಯ ಅದು ಬಿಟ್ಟು ಅವರಿಗೋಸ್ಕರ ಕಾಯುವುದು ಸರಿಯಲ್ಲ. ಟೈಂ ಪ್ರಕಾರ ಬರಬೇಕು.

ಶ್ರೀ ಬಿ. ಸ್ವಾಮಿರಾವ್.—ಪದೇ ಪದೇ ಈ ಬಗ್ಗೆ ನಾವು ಹೇಳುತ್ತಾ ಇದ್ದೇವೆ.

ಅಧ್ಯಕ್ಷರು.—ನಿಮ್ಮ ಉಪನಾಯಕರು ಹೇಳುತ್ತಾ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಬೇರೆಯವರಿಗೆ ಒಪ್ಪಿಸಿ ಹೋಗಬೇಕು. ಇಲ್ಲಾ ಅವರು ಹಾಜರಿರಬೇಕು.

ಶ್ರೀ ಬಿ. ರಾಚಯ್ಯ.—ಮೇಲ್ಮನೆಯಲ್ಲಿ ಅವರಿಗೆ ಕೆಲಸ ಇರುವುದರಿಂದ ಅಲ್ಲಿ ಹೋಗಿದ್ದಾರೆ, ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಈ ರೀತಿ ಡಿಫೆಂಡ್ ಮಾಡಬೇಡಿ. ಅವರ ಕಾಲಿಂಗ್ ಅಟೆನ್‌ಷನ್ ಇದೆ. ಅವರು ಹೊರಗಡೆ ಕಾಫಿ ಕುಡಿದುಕೊಂಡು ಕುಳಿತಿರಬೇಕು.

ಅಧ್ಯಕ್ಷರು.—ನೀವು ಮಂತ್ರಿಯಾಗಿದ್ದಾಗ, ನಾವು ಮಂತ್ರಿಯಾಗಿದ್ದಾಗ ಹೀಗೆ ಮಾಡುತ್ತಿದ್ದೆವೋ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಮ್ಮ ಕಾಲಿಂಗ್ ಅಟೆನ್‌ಷನ್ ಇದ್ದರೆ ನಾವು ಇರುತ್ತಿದ್ದೆವು. ಈ ರೀತಿ ಹೋಗುತ್ತಾ ಇರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ಗಂಟೆ ಕಾಲದಲ್ಲಿ ಪ್ರಶ್ನೋತ್ತರ ಮುಗಿಯಬೇಕಾದ್ದು ಎರಡು ಎರಡೂವರೆ ಗಂಟೆಗೆ ಮುಗಿಯುತ್ತದೆ ಅಂದರೆ ಕಷ್ಟವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್.—ಯಾವ ಪೈಲಿಗೆ ಉತ್ತರ ಬರಬೇಕೊ ಆ ಪೈಲಿನಲ್ಲಿ ಮಂತ್ರಿಗಳು ಇಲ್ಲದೇ ಹೋದರೆ ಉತ್ತರ ಹೇಗೆ ಬರುತ್ತದೆ. ನಮ್ಮದು ಕಾಲಿಂಗ್ ಅಟೆನ್‌ಷನ್ ಇತ್ತು, ಸಂಜೆಯಾದರೂ ಮಾಡಿಸಿ.

ಅಧ್ಯಕ್ಷರು.—ಈಗ ದೊಡ್ಡಮೇಟಿಯವರು ಗಮನ ಸೆಳೆಯಲಿ.

ಗಮನ ಸೆಳೆಯುವ ಸೂಚನೆಗಳು

ವಿದ್ಯುತ್ ಸರಬರಾಜಿನ ಅಡಚಣೆಯಿಂದ ನೀರಾವರಿ ಪಂಪ್ ಸೆಟ್ಟುಗಳಿಗೆ ಆಗಿರುವ ತೊಂದರೆ

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೆ, ರಾಜ್ಯದ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆಯಲ್ಲಿ ಸಾಕಷ್ಟು ಅಡಚಣೆಗಳು ಉಂಟಾಗಿರುವ ಬಗ್ಗೆ ಮಾನ್ಯ ವಾಣಿಜ್ಯ, ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—ಮಾನ್ಯ ಸಭಾಪತಿಯವರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಮಾನ್ಯ ಸಭಾಪತಿಗಳೇ, ೧೯೮೩ರಿಂದ ನೀರಾವರಿ ವಿದ್ಯುತ್ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಒದಗಿಸಲು ತೀಪ್ರ ಕ್ರಮಗಳನ್ನು ಕೈಗೊಂಡಿದೆ. ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ವರ್ಷಕ್ಕೆ ೪೦,೦೦೦ ದಿಂದ ೫೦,೦೦೦ ದವರೆಗೆ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಸರ್ಕಾರದ ನೀತಿಯಂತೆ ವ್ಯವಸಾಯಕ್ಕೆ ಪ್ರಾಮುಖ್ಯತೆ ನೀಡುವ ಉದ್ದೇಶದಿಂದ ಮತ್ತು ಈಗ ಲಭ್ಯವಿರುವ ವಿದ್ಯುಚ್ಛಕ್ತಿಯಲ್ಲಿ ವ್ಯವಸಾಯಕ್ಕೆ ಪ್ರಾಧಾನ್ಯತೆ ನೀಡಲು ಹೆಚ್ಚು ವಿದ್ಯುತ್ತನ್ನು ಒದಗಿಸಲಾಗುತ್ತಿದೆ.

ರೈತರ ಬೇಡಿಕೆಯಂತೆ ೬ ಗಂಟೆಗಳಪರಿಗಿನ ಲೋಡ್ ಶೆಡ್ಡಿಂಗ್‌ನ್ನು ಹಿಂದೆ ವಿಧಿಸಲಾಗುತ್ತಿದ್ದು, ರೈತರ ಪುನವಿಯನ್ನು ಪರಿಗಣಿಸಿ ಇದನ್ನು ಹಿಂತೆಗೆದುಕೊಳ್ಳಲಾಗಿದೆ. ಮತ್ತು ಪ್ರಸ್ತುತವಾಗಿ ವಿದ್ಯುತ್ ವಿತರಣೆಯ ಮೇಲಿನ ಬೇಡಿಕೆಯನ್ನು ಸರಿದೂಗಿಸಲು ಅವಶ್ಯವಾದಷ್ಟು ಮಾತ್ರ ಲೋಡ್ ಶೆಡ್ಡಿಂಗ್‌ನ್ನು ವಿಧಿಸಲಾಗುತ್ತಿದೆ. ಗ್ರಾಮಾಂತರ ಲೈನುಗಳ ಮೇಲೆ ಮತ್ತು ಸ್ಟೇಷನುಗಳಲ್ಲಿ ಹೆಚ್ಚು ಒತ್ತಡವಿರುವುದರಿಂದ ಇದರ ಬಗ್ಗೆ, ಈಗಾಗಲೇ ಸ್ಥಾಪಿತವಾದ ೧೧ ಕೆವಿ ಲೈನುಗಳನ್ನು ಮತ್ತು ಸ್ಟೇಷನುಗಳಲ್ಲಿನ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಬೇಡಿಕೆಗಳ ಅನುಗುಣವಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ, ಇದು ಸಂಪನ್ಮೂಲ ಲಭ್ಯತೆಯನ್ನು ಅವಲಂಬಿಸಿರುತ್ತದೆ.

ಇದಕ್ಕೆ ರೈತ ಸಮುದಾಯದ ಸಹಕಾರವು ಅತ್ಯಗತ್ಯವಾಗಿದೆ. ಈಗ ರಾಜ್ಯದಲ್ಲಿ ೫.೩ ಲಕ್ಷ ನೀರಾವರಿ ಪಂಪುಸೆಟ್ಟುಗಳು ಚಾಲ್ತಿಯಲ್ಲಿವೆ. ಈ ನೀರಾವರಿ ಪಂಪುಸೆಟ್ಟುಗಳು ರಾಜ್ಯದ ಆರ್ಥಿಕ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿರುವುದು ಗಮನಿಸಬೇಕಾದ ಅಂಶವಾಗಿದೆ.

ಈಗ ರೋಣ ತಾಲ್ಲೂಕಿಗೆ ೧೫ ಎಂ.ವಿ.ಎ., ೩೩/೧೧ ಕೆವಿ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಉಳ್ಳ ೩೩ ಕೆವಿ ೧೩ ಸಬ್ ಸ್ಟೇಷನ್ ವಿದ್ಯುಚ್ಛಕ್ತಿ ಒದಗಿಸುತ್ತಿದೆ. ಈ ಸ್ಟೇಷನ್ ಮೇಲಿರುವ ಹೆಚ್ಚಿನ ಒತ್ತಡವನ್ನು ಕಡಿಮೆ ಮಾಡಲು ೧೧೦–೩೩ ಕೆವಿ ಸಾಮರ್ಥ್ಯದ ಟಾನ್ಸ್‌ಫಾರ್ಮರನ್ನು ಇತ್ತೀಚೆಗೆ ಗದಗ್‌ನಲ್ಲಿ ಅಳವಡಿಸಲಾಗಿದೆ. ರೋಣಕ್ಕೆ ವಿದ್ಯುತ್ ಸರಬರಾಜು ಮಾಡುವ ಗದಗ್–ನರೇಗಲ್‌ನ ೩೩ ಕೆವಿ ಲೈನ್ ಅತಿ ಹೆಚ್ಚಿನ ಒತ್ತಡವನ್ನು ಅನುಭವಿಸುತ್ತಿರುವುದರಿಂದ ನರೇಗಲ್ ಸ್ಟೇಷನ್‌ನ ಸಾಮರ್ಥ್ಯವನ್ನು ೧೧೦ ಕೆವಿಗೆ ಹೆಚ್ಚಿಸಲು ಮತ್ತು ಈ ಕೆಲಸವನ್ನು ಬರುವ ೧೯೮೭–೮೮ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ರೋಣ ತಾಲ್ಲೂಕಿನಲ್ಲಿ ವಿದ್ಯುತ್ ಅಭಾವ ಮೇಲಿಂದ ಮೇಲೆ ಆಗುತ್ತಿದ್ದು, ಇದರಿಂದ ಲೋ ಲೋಡಿಂಗ್‌ನವರಿಗೆ ನೀರಾವರಿ ಪಂಪು ಸೆಟ್ಟುಗಳವರಿಗೆ ತೊಂದರೆಯಾಗಿ ಅನೇಕ ಪಂಪುಸೆಟ್ಟುಗಳು ಸುಟ್ಟುಹೋಗಿವೆ. ಮಾನ್ಯ ಮಂತ್ರಿಯವರು ಇದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದರು. ಇದನ್ನು ಪೂರ್ಣ ಮುಗಿಸಲು ಆರ್ಥಿಕ ಸಂಪನ್ಮೂಲ ಬೇಕು. ಈ ವರ್ಷವೇ ಮುಗಿಸುತ್ತೇವೆನ್ನುವ ಬಗ್ಗೆ ಭರವಸೆ ಕೊಡುತ್ತೀರಾ?

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಇದು ಒಂದು ತಿಂಗಳಲ್ಲಿ, ಒಂದು ವರ್ಷದಲ್ಲಿ ಮುಗಿಯುವಂಥ ಕೆಲಸವಲ್ಲ.